# ವೀಣೆಯಲ್ಲಿ ನವಿಲ ಲಾಸ್ಯ ಪಿಟೀಲಿನಲ್ಲಿ ಚಾಕೊಲೇಟ್!



**ವೀಣಾ ವಾದಕಿ ಜಯಂತಿ ಕುಮರೇಶ್ ಹಾಗೂ ಪಿಟೀಲು ವಾದಕ ಕುಮರೇಶ್ ದಂಪತಿ ಜೊತೆಗೂಡಿ 'ರನ್ ವಿತ್ ಸ' ಎಂಬ ಹೊಸ ಆಲ್ಬಂ ತಂದಿದ್ದಾರೆ. ಸಂಗೀತ ಕೇಳುತ್ತಲೇ ನಡಿಗೆ, ಓಟ, ಜಿಮ್ ಮುಂತಾದ ದೈನಂದಿನ ವರ್ಕೌಟ್ ಮಾಡಲು ಸಹಾಯವಾಗುವಂಥ ಈ ಆಲ್ಬಂ ಸಂಗೀತ ಕ್ಷೇತ್ರದಲ್ಲಿ ಹೊಸ ಪ್ರಯೋಗ.**

■ **ಉಮಾ ಅನಂತ್**

ವಿದುಷಿ ಜಯಂತಿ ಅವರ ಸರಸ್ವತಿ ವೀಣೆಯಲ್ಲಿ ರಾಗಗಳು ಅನುರಾಗ ಮೂಡಿಸುತ್ತವೆ. ನಾಟ ರಾಗದಲ್ಲಿ ಸಿಂಹ ಗರ್ಜಿಸುತ್ತದೆ, ಅಮೃತವರ್ಷಿಣಿ ಮಳೆರಾಗದಲ್ಲಿ ನವಿಲು ತನ್ನ ಸುಂದರವಾದ ರೆಕ್ಕೆ ಬಿಚ್ಚಿ ನರ್ತಿಸುತ್ತದೆ, 'ವರ್ಣಂ' ಅನ್ನು ತಂತಿಯಲ್ಲಿ ಮೀಟಿದಾಗ ಕೋಳಿಯ ಕೊ ಕೊ ಕ್ಕೋ ದನಿ ಇಂಪಾಗಿ ಮಾರ್ದನಿಸುತ್ತದೆ. ಈ ನಾದದಲ್ಲಿ ರಾಗ, ತಾಳ, ಭಾವ, ಲಯ ಲಹರಿ, ಸುಮಧುರ ಮಾಧುರ್ಯ ಝೇಂಕಾರ, ಓಂಕಾರದ ಮಾಂತ್ರಿಕತೆ ಸೃಷ್ಟಿಯಾಗುತ್ತದೆ.

ಮಗ್ಗುಲಲ್ಲೇ ವಿದ್ವಾನ್ ಕುಮರೇಶ್ ಪಿಟೀಲಿನಲ್ಲಿ ಮಕ್ಕಳಿಗಾಗಿಯೇ ನುಡಿಸಿದ 'ಚಾಕೊಲೇಟ್ ಮೆಲೊಡೀಸ್', 'ವೈಬ್ರಂಟ್ ನಾದಂ' ಯೂಟ್ಯೂಬ್ ಸಿರೀಸ್ ಇನ್ನಷ್ಟು, ಮತ್ತಷ್ಟು ಮೆಲ್ಲಬೇಕೆನಿಸುವಷ್ಟು ಸಿಹಿ ಉಣಿಸುತ್ತದೆ.

ಸಂಗೀತದಲ್ಲೇ ಬದುಕು ರೂಪಿಸಿದ, ರಾಗ–ಅನುರಾಗಗಳೆರಡನ್ನೂ ಬೆಸೆದ ಜಯಂತಿ–ಕುಮರೇಶ್ ಅವರ ವೀಣೆ–ಪಿಟೀಲು ವಾದನದ ಸೊಬಗೇ ಈ ತರದ್ದು. ಈ ಎರಡೂ ತಂತಿವಾದ್ಯಗಳು ಸೃಷ್ಟಿಸುವುದು ನಾದ ಜುಗಲಬಂದಿಯಲ್ಲ. ಕರ್ನಾಟಕ ಶಾಸ್ತ್ರೀಯ ಸಂಗೀತದ ಮೋಹನ, ಹಂಸಧ್ವನಿ, ಶಂಕರಾಭರಣ, ಕಿರವಾಣಿ, ಕಲ್ಯಾಣಿ, ನಾಟಕುರಂಜಿ, ಕಲ್ಯಾಣಿ, ಭೈರವಿ, ಚಾರುಕೇಶಿ, ಸಾವೇರಿ, ಹಂಸಾನಂದಿ... ಹೀಗೆ ಯಾವುದೇ ರಾಗಗಳಿರಲಿ, ಅವು ಮೂಡಿಸುವುದು ಬಂಧ–ಅನುಬಂಧಗಳನ್ನು. ಇದೇ 'ಸ್ಟ್ರಿಂಗ್ಸ್ ಅಟ್ಯಾಚ್ಡ್' (ತಂತಿಗಳ ಬೆಸುಗೆ) ಎಂಬ ವಿನೂತನ ಪರಿಕಲ್ಪನೆಯ ತಂತಿ ವಾದ್ಯಗಳ ಮೋಡಿ!

ಮೂಲತಃ ಉತ್ತರಪ್ರದೇಶದ ಕಾನ್ಪುರದವರಾದ ವಿದ್ವಾನ್ ಕುಮರೇಶ್ ಸುಮಾರು 50 ವರ್ಷಗಳಿಂದ ಪಿಟೀಲಿನೊಂದಿಗೆ ಅವಿನಾಭಾವ ಸಂಬಂಧವಿರಿಸಿ, ಹಲವು ಹೊಸ ಅಧ್ಯಯನ, ಸಂಶೋಧನೆ, ಅನ್ವೇಷಣೆಗಳನ್ನು ಮಾಡುತ್ತಾ ವಿಶ್ವದಾದ್ಯಂತ ಸಂಚರಿಸಿ ಸಂಗೀತ ಕಂಪನ್ನು ಪಸರಿಸಿದವರು. ಅನೇಕ ಶಿಷ್ಯಂದಿರನ್ನು ತಯಾರು ಮಾಡಿದ ಕುಮರೇಶ್, ತಮ್ಮ ಅಧ್ಯಾಪನದ ಪ್ರತಿ ಪಾಠವನ್ನೂ ವಿಡಿಯೊ ರೆಕಾರ್ಡ್ ಮಾಡಿ ದಾಖಲಿಸಿಕೊಂಡಿದ್ದಾರೆ.

**ವಿದುಷಿ ಜಯಂತಿ ಕುಮರೇಶ್, ವಿದ್ವಾನ್ ಕುಮರೇಶ್ ಸಂದರ್ಶನ**

◆ ಸಾಮಾನ್ಯವಾಗಿ ಎರಡು ವಿಭಿನ್ನ ತಂತಿವಾದ್ಯಗಳು ಅಥವಾ ಇಬ್ಬರು ಗಾಯಕರು ಒಟ್ಟಿಗೆ ಕಛೇರಿ ನೀಡುವುದು ಜುಗಲಬಂದಿ ಅನಿಸಿಕೊಳ್ಳುತ್ತದೆ. ನಿಮ್ಮ ಮಟ್ಟಿಗೆ ಅದು 'ತಂತಿಗಳ ಬೆಸುಗೆ'. ಅದು ಹೇಗೆ?

ನಾವು ಒಂದೇ ರಾಗವನ್ನು ಬೇರೆ ಬೇರೆ ವಾದ್ಯಗಳಲ್ಲಿ ಪ್ರಸ್ತುತಪಡಿಸಿದರೂ ಅದನ್ನು ಜುಗಲಬಂದಿ ಎನ್ನುವುದಿಲ್ಲ. ಇದು 'ಸ್ಟ್ರಿಂಗ್ಸ್ ಅಟ್ಯಾಚ್ಡ್'. ಈ ಮೂಲಕ ಎರಡು ತಂತಿವಾದ್ಯಗಳಲ್ಲಿ ಸಮನ್ವಯತೆ, ಸೌಹಾರ್ದ ಹಾಗೂ ಸಮರಸವನ್ನು ಮೂಡಿಸುವ ಪ್ರಯತ್ನ ಮಾಡುತ್ತಿದ್ದೇವೆ. ತಂತಿವಾದ್ಯಗಳಲ್ಲಿ ಹೊಸತನ್ನು ನೀಡಲು ಬೇರೆ ಬೇರೆ ಪ್ರಯೋಗಗಳನ್ನು ಮಾಡುತ್ತೇವೆ. ಪರಂಪರೆಯ ಸಂಗೀತವಾದರೂ ಇಂದಿನ ಕೇಳುಗರು ಬಯಸುವುದು ಹೊಸ ನಾದವನ್ನು. ಇದಕ್ಕಾಗಿ ಮಕ್ಕಳಿಗಾಗಿಯೇ 'ಚಾಕೊಲೇಟ್ ಮೆಲೊಡೀಸ್' ಸಿರೀಸ್ ತಂದಿದ್ದೇವೆ. ಇದರಲ್ಲಿ ಹೊಸ ಮೂಡ್, ವೈಬ್ರೇಷನ್ಸ್ ಕ್ರಿಯೇಟ್ ಮಾಡಿರುವೆ. ಈ ಪ್ರಯೋಗ ಜಗತ್ತಿನಾದ್ಯಂತ ಹಲವಾರು ಮಕ್ಕಳಿಗೆ ಇಷ್ಟವಾಗಿದೆ.

◆ ಪಿಟೀಲು ಕಲಿಯಲು ಇಷ್ಟಪಡುವ ಮಕ್ಕಳ ಸಂಖ್ಯೆ ಕಡಿಮೆ. ಹೊಸ ತಲೆಮಾರಿನ ಕಲಾವಿದರಲ್ಲಿ ಉನ್ನತ ಸಾಧನೆ ಮಾಡಿರುವವರು ನಮ್ಮಲ್ಲಿರುವುದು ಬೆರಳೆಣಿಕೆಯಷ್ಟು ಮಂದಿ. ಯುವ ಕಲಾವಿದರನ್ನು ರೂಪಿಸಲು ನೀವು ನಡೆಸಿರುವ ಪ್ರಯತ್ನಗಳೇನು?

ಪಿಟೀಲು ನುಡಿಸುವುದು ಕಷ್ಟ ಎಂಬ ಮನೋಭಾವನೆ ಹೊಸ ತಲೆಮಾರಿನವರಲ್ಲಿದೆ. ಆದರೆ ಪಿಟೀಲನ್ನು ಯಾರು ಬೇಕಾದರೂ ಕಲಿಯಬಹುದು. ಈಗ ನಾವು ಡಿಜಿಟಲ್